




ಸಾಂಟಾಕ್ಲಾರದ ಸೆಂಟ್ರಲ್ ಪಾರ್ಕ್ ಹಾಗೂ ಕುಪರ್ಟಿನೊ ಅಮೆರಿಕದ ಎರಡು ಬೃಹತ್ ಲೈಬ್ರರಿಗಳು. ಪುಸ್ತಕ ಪ್ರೇಮಿಯಾದ ನನಗೆ ಸಹಜವಾಗಿ ಅಮೆರಿಕದ ಲೈಬ್ರರಿ ಹೇಗಿದೆಯೆಂದು ನೋಡುವ ಕುತೂಹಲವಿತ್ತು. ಅಲ್ಲಿ ಪ್ರತಿ ಪುಟ್ಟ ಊರಿನಲ್ಲೂ ದೊಡ್ಡ ಲೈಬ್ರರಿಯಿರುತ್ತದೆ! ಎಷ್ಟು ದೊಡ್ಡದೆಂದರೆ ಅರಮನೆಯೇ! ನನ್ನೂರು ಮಡಿಕೇರಿಯ ಕೇಂದ್ರ ಗ್ರಂಥಾಲಯ ಮಿಣುಕು ಹುಳುವಾದರೆ ಇದು ಸೂರ್ಯ. ನಾನು ಅಂತಹ ಸರ್ವ ಸುಸಜ್ಜಿತ ಲೈಬ್ರರಿಯನ್ನು ನೋಡಿದ್ದು ಅದೇ ಮೊದಲು. ಎರಡೂ ಒಂದಕ್ಕಿಂತ ಒಂದು ಅದ್ಭುತ. ಕಟ್ಟಡದ ವಿಸ್ತಾರ 80,000 ಚದರ ಅಡಿಗಳಿಗಿಂತಲೂ ಹೆಚ್ಚು. ವಿಶಾಲ ಅಂತಸ್ತನ್ನು ಹೊಂದಿದ್ದು ನಾಲ್ಕು ಲಕ್ಷಕ್ಕಿಂತಲೂ ಅಧಿಕ ಪುಸ್ತಕಗಳಿವೆ. ಬರೀ ಪುಸ್ತಕಗಳು ಮಾತ್ರ ಅಲ್ಲ, ಮ್ಯಾಗಸಿನ್‌ಗಳು, ವೃತ್ತ ಪತ್ರಿಕೆಗಳು, ಕಂಪ್ಯೂಟರುಗಳು, ಸಾವಿರಾರು ಡಿವಿಡಿ, ಸಿಡಿ, ಆಡಿಯೊ ಪುಸ್ತಕ, ಇ—ಪುಸ್ತಕಗಳಿವೆ. ಪುಟ್ಟ ಊರಿನಲ್ಲಿಯೇ ಇಷ್ಟು ದೊಡ್ಡ ಲೈಬ್ರರಿಯಿದ್ದರೆ ಇನ್ನು ಅಮೆರಿದಕ ದೊಡ್ಡ ನಗರಗಳಲ್ಲಿ ಇರುವ ಲೈಬ್ರರಿ ಎಷ್ಟು ದೊಡ್ಡದಿರಬಹುದು ಎಂದು ಅಚ್ಚರಿಪಟ್ಟೆ.

ಮೊದಲು ಹೋಗಿದ್ದು ಸಾಂಟಾಕ್ಲಾರ ಸೆಂಟ್ರಲ್ ಪಾರ್ಕ್ ಲೈಬ್ರರಿಗೆ. ಒಳಹೊಕ್ಕ ಕೂಡಲೇ ಸ್ವಾಗತಕಾರಿಣಿ ಬಳಿ ಬಂದು 'ಹಲೋ! ನಿಮ್ಮ ಬಳಿ ಪಾಸ್‌ಪೋರ್ಟ್, ವೀಸಾ ಇದೆಯಾ? ಯಾವ ದೇಶದಿಂದ ಬಂದಿದ್ದೀರಿ?' ಎಂದು ಕೇಳಿದಳು. 'ಭಾರತದಿಂದ ಬಂದಿದ್ದೇನೆ. ಪಾಸ್‌ಪೋರ್ಟ್ ನಾನು ಉಳಿದುಕೊಂಡ ತಂಗಿ ಮನೆಯಲ್ಲೇ ಬಿಟ್ಟು ಬಂದೆ' ಎಂದೆ. 'ಓ! ನೀವು ಪಾಸ್‌ಪೋರ್ಟ್ ತೋರಿಸಿದರೆ ನಿಮಗೆ ಬೇಕಾದ ಪುಸ್ತಕ ನೀವಿರುವ ಮನೆಗೆ ತೆಗೆದುಕೊಂಡು ಹೋಗಿ ಓದಬಹುದು. ಅಮೆರಿಕ ಬಿಡುವ ಮೊದಲು ತಲುಪಿಸಿದರೆ ಸಾಕು' ಎಂದಳು.

ನನಗೋ ಆಶ್ಚರ್ಯ. 'ಹಾಂ. ಪರದೇಶದವರಿಗೆ ಯಾವ ಧೈರ್ಯದ ಮೇಲೆ ಪುಸ್ತಕ ಕೊಡುತ್ತೀರಿ? ಒಂದು ವೇಳೆ ನಾನು ನಿಮಗೆ ವಾಪಾಸು ಕೊಡದೆ ನನ್ನ ದೇಶಕ್ಕೆ ಕೊಂಡುಹೋದರೆ ನೀವೇನು ಮಾಡುತ್ತೀರಿ?' ಎಂದು ಕೇಳಿದೆ. 'ನೀವು ಹಾಗೆ ಮಾಡಲಾರಿರಿ ಎಂದು ನನಗೆ ಗೊತ್ತು. ನಮಗೆ ಇಲ್ಲಿಗೆ ಬರುವವರ ಮೇಲೆ ನಂಬಿಕೆ ಇದೆ' ಎಂದಳು. 'ಥ್ಯಾಂಕ್ಯೂ. ನನಗೆ ಪುಸ್ತಕ ಬೇಡ. ಲೈಬ್ರರಿಯನ್ನು